## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1271 |
| 2 | ಸದಸ್ಯರ ಹೆಸರು | ಶ್ರೀ ರಮೇಶ್ ಬಾಬು<br>(ನಾಮನಿರ್ದೇಶಿತರು) |
| 3 | ಉತ್ತರಿಸಬೇಕಾದ ದಿನಾಂಕ | 17-12-2025 |
| 4 | ಉತ್ತರಿಸುವವರು | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |
| | **ಪ್ರಶ್ನೆಗಳು** | **ಉತ್ತರ** |
| ಅ) | ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆಯ ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೇಂದ್ರದಿಂದ ರಾಜ್ಯಕ್ಕೆ ನೀಡಿರುವ ಪ್ರೋತ್ಸಾಹ ಧನ ಎಷ್ಟು; ಬಿಡುಗಡೆ ಆದ ಅನುದಾನವೆಷ್ಟು; ರಾಜ್ಯದ ಎಷ್ಟು ರೈತರಿಗೆ ಇದರ ಲಾಭವಾಗಿರುತ್ತದೆ; | ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆಯ ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಕೇಂದ್ರದಿಂದ ರಾಜ್ಯಕ್ಕೆ (ರೇಷ್ಮೆ ಇಲಾಖೆಗೆ) ನೀಡಿರುವ ಪ್ರೋತ್ಸಾಹಧನ, ಬಿಡುಗಡೆಯಾದ ಅನುದಾನದ ವಿವರಗಳು ಮತ್ತು ಫಲಾನುಭವಿಗಳ ಸಂಖ್ಯೆಈ ಕೆಳಕಂಡಂತಿದೆ.<br>(ರೂ. ಲಕ್ಷಗಳಲ್ಲಿ)<br>ವರ್ಷ / ಪ್ರೋತ್ಸಾಹ ಧನ / ಬಿಡುಗಡೆ / ಫಲಾನುಭವಿ ಸಂಖ್ಯೆ<br>2022-23 / 760.816 / 760.816 / 2727<br>2023-24 / 594.853 / 594.853 / 1671<br>2024-25 / 686.885 / 686.885 / 2251 |
| ಆ) | ಈ ಯೋಜನೆಯ ಲಾಭ ಪಡೆಯಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು; | **ಕೇಂದ್ರ ಸರ್ಕಾರದ ಮಾನದಂಡಗಳು:**<br>1. ಫಲಾನುಭವಿಗಳು ನೀರಾವರಿ ಮೂಲವನ್ನು ಹೊಂದಿರಬೇಕು. ಹಾಗೂ ನೀರಾವರಿಗೆ ಯೋಗ್ಯವಿರುವಂತಹ ನೀರನ್ನು ಹೊಂದಿರಬೇಕು ಜೊತೆಗ ಹನಿ ನೀರಾವರಿ ಘಟಕಗಳು ಕಾರ್ಯನಿವಹಿಸಲು ಅವಶ್ಯವಿರುವ ವಿದ್ಯುಚ್ಛಕ್ತಿ ಅಥವಾ ಇತರ ಶಕ್ತಿಮೂಲಗಳನ್ನು ಹೊಂದಿರಬೇಕು.<br>2. ಎಲ್ಲ ವರ್ಗದ ಫಲಾನುಭವಿಗೆ ಗರಿಷ್ಟ 2.00 ಹೆಕ್ಟೇರ್ ವರೆಗೆ ಶೇ.55 ರಷ್ಟು ಮತ್ತು 2.00 ಹೆಕ್ಟೇರ್‌ಗೆ ಮೇಲ್ಪಟ್ಟು 5 ಹೆಕ್ಟೇರ್‌ವರೆಗೂ ಶೇಕಡ 45 ರಷ್ಟು ಸಹಾಯಧನ ಪಾವತಿಸಲಾಗುವುದು. ಈಗಾಗಲೇ ತಮ್ಮ ಜಮೀನಿಗೆ ಸಹಾಯಧನದ ಪ್ರಯೋಜನಗಳನ್ನು ಪಡೆದಿರುವ ಫಲಾನುಭವಿಗಳು, ಹನಿ ನೀರಾವರಿ ವ್ಯವಸ್ಥೆಯ ಯೋಜಿತ ಜೀವಿತಾವಧಿಯು 7 ವರ್ಷಗಳಾದ ನಂತರ ಅದೇ ಜಮೀನಿಗೆ / ತೋಟಕ್ಕೆ ಮತ್ತೆ ಹೊಸದಾಗಿ ಹನಿ ನೀರಾವರಿ ಘಟಕ ಅಳವಡಿಸಿಕೊಂಡಲ್ಲಿ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ. |

<table>
<tr>
<td></td>
<td></td>
<td>

**ರಾಜ್ಯ ಸರ್ಕಾರದ ಮಾನದಂಡಗಳು:**

1. ಫಲಾನುಭವಿಗಳು ರೇಷ್ಮೆ ಬೆಳೆಗಾರರಾಗಿದ್ದು, ಜಮೀನು ಅವರ ಹೆಸರಿನಲ್ಲಿರಬೇಕು. ಜಂಟಿ ಖಾತೆಯಾಗಿದ್ದಲ್ಲಿ ಇತರೆ ಖಾತೆದಾರರ ಒಪ್ಪಿಗೆ ಪತ್ರ ಪಡೆದಿರಬೇಕು. ಮಹಿಳೆಯರ ಹೆಸರಿನಲ್ಲಿ ಖಾತೆ ಹೊಂದಿದ್ದಲ್ಲಿ, ಮಹಿಳಾ ಖಾತೆದಾರರೇ ಅರ್ಜಿ ಸಲ್ಲಿಸಬೇಕು.
2. ಎಲ್ಲ ವರ್ಗದ ಫಲಾನುಭವಿಗೆ ಗರಿಷ್ಟ 2.00 ಹೆಕ್ಟೇರ್ ವರೆಗೆ ಶೇ.45 ರಷ್ಟು ಸಹಾಯಧನ ಪಾವತಿಸಲಾಗುವುದು.
3. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ರೇಷ್ಮೆ ಬೆಳೆಗಾರರು RD ಸಂಖ್ಯೆ ಇರುವಂತಹ ಜಾತಿ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ ಸಲ್ಲಿಸಬೇಕು.

</td>
</tr>
<tr>
<td>ಇ)</td>
<td>ರಾಷ್ಟ್ರೀಯ ಕೃಷಿ ಯೋಜನೆಯ ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾಗಿರುವ ಅನುದಾನ ಎಷ್ಟು; ಉಪಯೋಗಿಸಿಕೊಂಡಿರುವ ಅನುದಾನಗಳೆಷ್ಟು; ಫಲಾನುಭವಿಗಳಿಗೆ ನಿಗದಿಪಡಿಸಿರುವ ಮಾನದಂಡಗಳು ಏನು;</td>
<td>

ರಾಷ್ಟ್ರೀಯ ಕೃಷಿ ಯೋಜನೆಯ ಅಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮತ್ತು ಉಪಯೋಗಿಸಿಕೊಂಡಿರುವ ಅನುದಾನದ ವಿವರ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

<table>
<tr><th>ವರ್ಷ</th><th>ಬಿಡುಗಡೆಯಾಗಿರುವ ಅನುದಾನ</th><th>ಉಪಯೋಗಿಸಿರುವ ವೆಚ್ಚ</th></tr>
<tr><td>2022-23</td><td>524.41</td><td>409.31</td></tr>
<tr><td>2023-24</td><td>32.74<br>( ಮರುಮೌಲೀಕೃತ ಮೊತ್ತ )</td><td>32.67</td></tr>
<tr><td>2024-25</td><td colspan="2">ಅನುದಾನ ಬಿಡುಗಡೆಯಾಗಿರುವುದಿಲ್ಲ</td></tr>
</table>

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಬರುವ **"ಗುಣಮಟ್ಟದ ಉತ್ಪಾದನೆಗಾಗಿ ಮಣ್ಣಿನ ಫಲವತ್ತತೆ ಸಮೃದ್ಧಿಗೆ ಪ್ಯಾಕೇಜ್**" ಮತ್ತು **"ಹಿಪ್ಪುನೇರಳೆ ತೋಟಕ್ಕೆ ಟ್ರಂಚಿಂಗ್ ಮತ್ತು ಮಲ್ಚಿಂಗ್ ಮಾಡುವ ರೇಷ್ಮೆ ಕೃಷಿಕರಿಗೆ ಸಹಾಯಧನ**" ಯೋಜನೆಗಳಿಗೆ ನಿಗದಿಪಡಿಸಿರುವ ಮಾನದಂಡಗಳು ಕೆಳಕಂಡಂತಿದೆ.

1. ಸ್ವಂತ ಹಿಪ್ಪುನೇರಳೆ ತೋಟ ಹೊಂದಿದ್ದು, ನೀರಾವರಿ ಸೌಲಭ್ಯವಿರುವ ಮೈಸೂರು/ದ್ವಿತಳಿ ಬಿತ್ತನೆ ವಲಯದ/ ಕ್ಲಸ್ಟರ್ ಪ್ರದೇಶ ಹಾಗೂ ದ್ವಿತಳಿ ಸಂಕರಣ ಬೆಳೆಗಾರರಾಗಿರಬೇಕು.
2. ಪ್ರತಿ ಎಕರೆ ಹಿಪ್ಪುನೇರಳೆ ತೋಟಕ್ಕೆ ವಾರ್ಷಿಕವಾಗಿ 40 ಕೆ.ಜಿ ಹಸಿರುಗೊಬ್ಬರದ ಬೀಜ, 400 ಕೆ.ಜಿ ಬೇವಿನ ಹಿಂಡಿ, 20ಕೆ.ಜಿ ಜೈವಿಕ ಗೊಬ್ಬರ ಹಾಗೂ 5 ಲೀಟರ್ ಸಸ್ಯ ಸಂವರ್ಧಕವನ್ನು ನೀಡಬೇಕು.

</td>
</tr>
</table>

<table>
<tr><td></td><td></td><td>3. ಹಿಪ್ಪುನೇರಳೆ ತೋಟದಲ್ಲಿ ಸಾಲು ಬಿಟ್ಟು ಸಾಲಿನಲ್ಲಿ ಕನಿಷ್ಠ 0.3 * 0.6 ಮೀ., ಅಳತೆಯ ಟ್ರೆಂಚ್ ತೆಗೆದು, ಟ್ರೆಂಚ್ ಗೆ ಸಸ್ಯ ಜನ್ಯ ತ್ಯಾಜ್ಯ ವಸ್ತುಗಳನ್ನು ತುಂಬಿ, ಅದರ ಮೇಲೆ ಒಂದು ಗುಂಟೆಗೆ 200 ಕೆ.ಜಿ.ಯಂತೆ ಕೊಟ್ಟಿಗೆ ಗೊಬ್ಬರವನ್ನು ಹಾಕಿ, ಮಣ್ಣಿನಿಂದ ಮುಚ್ಚುವುದು.<br><br>4. ಮೇಲಿನ ಎರಡು ಕಾರ್ಯಕ್ರಮಗಳ ಘಟಕ ದರಕ್ಕೆ ಶೇ.50 ರಷ್ಟು ಸಹಾಯಧನವನ್ನು ನೀಡಲಾಗುವುದು.</td></tr>
<tr><td>ಈ)</td><td>ಕೇಂದ್ರ ಸರ್ಕಾರದಿಂದ ರಾಜ್ಯದ ರೇಷ್ಮೆ ಬೆಳೆಗಾರರಿಗೆ ದೊರೆಯುತ್ತಿರುವ ಯೋಜನೆಗಳು ಯಾವುವು; ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಯೋಜನೆಗಳಲ್ಲಿ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ಅನುದಾನಗಳನ್ನು ಬಿಡುಗಡೆ ಮಾಡಿದೆ; ಎಷ್ಟು ಅನುದಾನಗಳನ್ನು ಬಿಡುಗಡೆ ಮಾಡಿದೆ;</td><td>ಕೇಂದ್ರ ಸರ್ಕಾರದಿಂದ ರಾಜ್ಯದ ರೇಷ್ಮೆ ಬೆಳೆಗಾರರಿಗೆ ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪಿ.ಎಂ.ಕೆ.ಎಸ್.ವೈ) ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್.ಕೆ.ವಿ.ವೈ) ಯೋಜನೆಗಳು ದೊರೆಯುತ್ತಿವೆ. ಈ ಯೋಜನೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ರೇಷ್ಮೆ ಇಲಾಖೆಗೆ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಕಂಡಂತಿದೆ.<br><br>(ರೂ. ಲಕ್ಷಗಳಲ್ಲಿ)
<table>
<tr><th>ವರ್ಷ</th><th>ಪಿ.ಎಂ.ಕೆ.ಎಸ್.ವೈ</th><th>ಆರ್.ಕೆ.ವಿ.ವೈ</th></tr>
<tr><td>2022-23</td><td>760.816</td><td>524.41</td></tr>
<tr><td>2023-24</td><td>594.853</td><td>32.74</td></tr>
<tr><td>2024-25</td><td>686.885</td><td>0</td></tr>
</table></td></tr>
<tr><td>ಉ)</td><td>ಕೇಂದ್ರ ಸರ್ಕಾರದ ವಿಶೇಷ ಸಹಾಯಧನ ಅನುದಾನ ಕೋರಿ ರಾಜ್ಯ ಸರ್ಕಾರ ಪ್ರಸ್ತಾವನೆ ಸಲ್ಲಿಸಿದೆಯೇ? (ಮಾಹಿತಿ ಒದಗಿಸುವುದು)</td><td>ಕೇಂದ್ರ ಸರ್ಕಾರದ ವಿಶೇಷ ಸಹಾಯಧನ ಅನುದಾನ ಕೋರಿ ರೇಷ್ಮೆ ಇಲಾಖೆಯಿಂದ ಯಾವುದೇ ಪ್ರಸ್ತಾವನೆಯನ್ನು ಸಲ್ಲಿಸಿರುವುದಿಲ್ಲ.</td></tr>
</table>

**ಸಂಖ್ಯೆ:ರೇಷ್ಮೆ 427 ರೇಇವಿ 2025**

(ಕೆ.ವೆಂಕಟೇಶ್)
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು